**<u>3 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ.</u>**

**<u>ಎಸ್.ಸಿ. ಸಂಖ್ಯೆಃ 51/2017</u>**

ದಿನಾಂಕಃ 07.01.2019
(ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು)

ಚಾಸಾ - 33 ಪ್ರಾಸಾ - 20

| | | |
|---|---|---|
| ಹೆಸರು | ಃ | ಚಂದ್ರ |
| ತಂದೆಯ/ಗಂಡನ ಹೆಸರು | ಃ | ಲೇಟ್ ಹುಚ್ಚೇಗೌಡ |
| ವಯಸ್ಸು | ಃ | 59 ವರ್ಷ |
| ಉದ್ಯೋಗ | ಃ | ಎಎಸ್ಐ, ರಾಮನಗರ ಗ್ರಾಮಾಂತರ ಪೊಲೀಸ್ ಠಾಣೆ |
| ವಾಸಸ್ಥಳ | ಃ | ಚನ್ನಪಟ್ಟಣ |

**<u>ಮುಖ್ಯವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ</u>**

ಕಳೆದ 3 ವರ್ಷದಿಂದ ನಾನು ರಾಮನಗರ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಎಎಸ್ಐ ಆಗಿ ಕರ್ತವ್ಯ ಮಾಡುತ್ತಿದ್ದೇನೆ.

2. ದಿನಾಂಕ 17.01.2017 ರಂದು ಮಧ್ಯಾಹ್ನ 1.15 ಗಂಟೆಯ ಸಮಯದಲ್ಲಿ ದೂರವಾಣಿಯ ಮೂಲಕ ಕೆಂಪವಡೇರಹಳ್ಳಿ ಗ್ರಾಮದ ವಾಸಿ ಗಂಗಾಧರ್ ರವರ ಪತ್ನಿ ಶ್ರೀಮತಿ.ಪ್ರೇಮ ರವರು ತನ್ನ ಮನೆಗೆ ಯಾರೋ ಅಪರಿಚಿತ ವ್ಯಕ್ತಿಗಳು ನುಗ್ಗಿ ಅವರ ಕೈಕಾಲುಗಳನ್ನು ಕಟ್ಟಿ ಹಾಕಿ ಮನೆಯಲ್ಲಿದ್ದ ಚಿನ್ನದ ಒಡವೆ ಮತ್ತು ನಗದು ಹಣವನ್ನು ಕಿತ್ತುಕೊಂಡು ಹೋಗಿರುತ್ತಾರೆ ಎಂದು ಕೊಟ್ಟ ಮಾಹಿತಿ ಮೇರೆಗೆ ಮಧ್ಯಾಹ್ನ 2 ಗಂಟೆಗೆ ಸ್ಥಳಕ್ಕೆ ಭೇಟಿ ನೀಡಿ ಸ್ಥಳದಲ್ಲಿದ್ದ ಪಿರ್ಯಾದಿ ಶ್ರೀಮತಿ.ಪ್ರೇಮ ನೀಡಿದ ಈಗ ನೋಡಿದ ನಿಶಾನೆ ಪಿ 1 ದೂರನ್ನು ಮಧ್ಯಾಹ್ನ 2.30 ಗಂಟೆಗೆ

ಸ್ವೀಕರಿಸಿ ವಾಪಸ್ಸು ಠಾಣೆಗೆ ಬಂದು ಮಧ್ಯಾಹ್ನ 3.15 ಗಂಟೆ ಸಮಯದಲ್ಲಿ ಠಾಣಾ ಮೊಕದ್ದಮೆ ಸಂಖ್ಯೆ 26/2017 ಕಲಂ.392 ಐಪಿಸಿ ರೀತಿಯಲ್ಲಿ ಪ್ರಕರಣವನ್ನು ದಾಖಲಿಸಿಕೊಂಡಿದ್ದೇನೆ. ಆ ರೀತಿ ಪ್ರಕರಣವನ್ನು ದಾಖಲಿಸಿಕೊಂಡ ಕುರಿತು ನಿಶಾನೆ ಪಿ 1 ದೂರಿನ ಮೇಲೆ ನಿಶಾನೆ ಪಿ 1(ಬಿ) ರಂತೆ ರುಜು ಮಾಡಿದ್ದೇನೆ.

3. ಸದರಿ ದೂರಿನ ಆಧಾರದಲ್ಲಿ ನ್ಯಾಯಾಲಯಕ್ಕೆ ಸಲ್ಲಿಸಿದ ಪ್ರಥಮ ವರ್ತಮಾನ ವರದಿಯನ್ನು ಈಗ ನೋಡಿದೆ. ಅದರಲ್ಲಿ ನನ್ನ ರುಜು ಇದೆ. ಸದರಿ ಪ್ರಥಮ ವರ್ತಮಾನ ವರದಿಯನ್ನು ನಿಶಾನೆ ಪಿ18 ಮತ್ತು ಸಾಕ್ಷಿಯ ರುಜುವನ್ನು ನಿಶಾನೆ ಪಿ 18(ಎ) ಎಂದು ನಿಶಾನೆ ಮಾಡಲಾಯಿತು.

4. ಪ್ರಕರಣವು ಘೋರ ಪ್ರಕರಣವಾದ್ದರಿಂದ ಕಡತವನ್ನು ವೃತ್ತ ನಿರೀಕ್ಷಕರಿಗೆ ಹಸ್ತಾಂತರಿಸಿದ್ದೇನೆ.

**<u>ಪಾಟೀ ಸವಾಲುಃ</u> ಶ್ರೀ.ಎಸ್.ಎಂ. ವಕೀಲರಿಂದ – 5 ರಿಂದ 7 ನೇ ಆರೋಪಿಗಳ ಪರವಾಗಿಃ-**

5. ನಿಶಾನೆ ಪಿ 18 ರಲ್ಲಿ 3 ಜನ ಅಪರಿಚಿತ ವ್ಯಕ್ತಿಗಳು ಎಂದು ನಮೂದಿಸಲಾಗಿದೆ ಎನ್ನುವುದು ಸರಿ. ಕೇವಲ 3 ಜನ ಅಪರಿಚಿತ ವ್ಯಕ್ತಿಗಳ ವಿರುದ್ಧ ಮಾತ್ರ ಕೇಸು ದಾಖಲಿಸಿಕೊಂಡಿದ್ದೀರಿ ಎಂಬ ಪ್ರಶ್ನೆಗೆ ಸಾಕ್ಷಿಯು ಅವರು ಕೊಟ್ಟ ದೂರಿನ ಆಧಾರದಲ್ಲಿ ದಾಖಲಿಸಿಕೊಂಡಿದ್ದೇನೆ ಎಂದು ಉತ್ತರಿಸಿದ್ದಾರೆ.

<u>ಪಾಟೀ ಸವಾಲುಃ</u> **1 ರಿಂದ 4 ನೇ ಆರೋಪಿಗಳ ಪರ ವಕೀಲರಿಂದಃ-**

6. ನನಗೆ ಬಂದ ಖಚಿತ ವರ್ತಮಾನವನ್ನು ನಾನು ಠಾಣಾ ದಿನಚರಿಯಲ್ಲಿ ನಮೂದು ಮಾಡಿದ್ದೇನೆ. ಆ ದಿನಚರಿಯ ಪ್ರತಿಯನ್ನು ನ್ಯಾಯಾಲಯಕ್ಕೆ ಕೊಟ್ಟಿಲ್ಲ. ನಾನು ದಿನಚರಿಯಲ್ಲಿ ನಮೂದಿಸದೇ ಇರುವ ಕಾರಣಕ್ಕಾಗಿ ದಿನಚರಿಯ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎನ್ನುವುದು ಸರಿಯಲ್ಲ.

7. ನಾನು ಆ ದಿವಸ ಕರ್ತವ್ಯದಲ್ಲಿ ಇದ್ದೆ ಎಂದು ತೋರಿಸಲು ಎಸ್.ಹೆಚ್.ಡಿ.ಯಲ್ಲಿ ನಮೂದು ಇದೆ. ಆ ಎಸ್.ಹೆಚ್.ಡಿ.ಯನ್ನು ನ್ಯಾಯಾಲಯಕ್ಕೆ ಕೊಟ್ಟಿಲ್ಲ. ಆ ದಿವಸ ನಾನು ಕರ್ತವ್ಯದಲ್ಲಿ ಇರದೇ ಇದ್ದ ಕಾರಣಕ್ಕಾಗಿ ಅಂತಹ ದಾಖಲೆಗಳನ್ನು ಕೊಟ್ಟಿಲ್ಲ ಎನ್ನುವುದು ಸರಿಯಲ್ಲ.

8. ನಮ್ಮ ಠಾಣೆಯಿಂದ ನ್ಯಾಯಾಲಯಕ್ಕೆ 3 ಕಿ.ಮೀ. ದೂರ. ನಿಶಾನೆ ಪಿ 18 ಪ್ರಥಮ ವರ್ತಮಾನ ವರದಿಯನ್ನು 24 ಗಂಟೆಗಳ ಬಳಿಕ ನ್ಯಾಯಾಧೀಶರಿಗೆ ಯಾಕೆ ರವಾನಿಸಲಾಯಿತು ಎಂಬುವುದನ್ನು ನನಗೆ ತಿಳಿಸಲಾಗದು. ಸುಳ್ಳು ಪ್ರಕರಣವನ್ನು ದಾಖಲಿಸಿಕೊಂಡಿರುವ ಕಾರಣಕ್ಕಾಗಿ ಆ ರೀತಿ ವಿಳಂಬವಾಗಿ ಪ್ರಥಮ ವರ್ತಮಾನ ವರದಿಯನ್ನು ಸೃಷ್ಟಿಸಿಕೊಂಡಿದ್ದೇವೆ ಎನ್ನುವುದು ಸರಿಯಲ್ಲ. ಆ ರೀತಿ ಸೃಷ್ಟಿಸಿಕೊಂಡಿರುವ ಕಾರಣಕ್ಕಾಗಿಯೇ ಪ್ರಥಮ ವರ್ತಮಾನ ವರದಿಯನ್ನು ಸಲ್ಲಿಸಲು ವಿಳಂಬವಾಗಿದೆ ಎನ್ನುವುದು ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ಗೋಪಾಲ ಕೃಷ್ಣ ರೈ ಟಿ.)
3 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಮನಗರ.